(ಶ್ರೀ ಎ. ಮಸಿಯಪ್ಪ.)

ಕೊಟ್ಟು, ಮುನಿಸಿಪಾಲಿಟಿಯವರು ತಮ್ಮ ಭಾಗದ ಒಂದು ಸಾವಿರ ರೂಪಾಯಿ ಕೊಡುವುದಕ್ಕೆ ಒಂದು ನಿರ್ಣಯಮಾಡಿ ಕಳುಹಿಸಿಕೊಟ್ಟು, ಈಗ ಸರ್ಕಾರದಲ್ಲಿ ಅದು ಬಹಳ ಕಾಲದಿಂದಲೂ ನಿಂತುಹೋಗಿರುವುದು ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ನಾನು ಅದನ್ನು ವಿಚಾರಿಸುತ್ತೇನೆ

ಶ್ರೀ ಎ. ಮಸಿಯಪ್ಪ.—ಆದಷ್ಟು ಜಾಗ್ರತೆ ಅದನ್ನು ಮಂಜೂರುಮಾಡಿ ಆಲ್ಲಿ ಕೇಂದ್ರವನ್ನು ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಬರುವ ವರ್ಷ ಚಿತ್ರದುರ್ಗದಲ್ಲಿ ಒಂದು ಕೇಂದ್ರವನ್ನು ಪ್ರಾರಂಭ ಮಾಡಬೇಕೆನ್ನುವುದು ಯೋಜನೆಯಲ್ಲಿದೆ.

ಶ್ರೀ ಟಿ. ಎನ್. ಮೂಡಲಗಿರಿ ಗೌಡ.—ಕೃತಕವಾದ ಗರ್ಭಧಾರಣೆ ಪ್ರಯೋಗವನ್ನು ಉತ್ತಮವಾದ ರಾಸುಗಳಿರತಕ್ಕಂಥ ಸ್ಥಳಗಳಲ್ಲಿ ರೈತರು ಪಡೆಯುವುದಕ್ಕೆ ಹಿಂಜರಿಯುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಕೆಲವು ಕಡೆ ಹಾಗೆ ಹಿಂಜರಿಯುತ್ತಿದ್ದಾರೆ. ಕೆಲವು ಕಡೆ ಬಹಳ ಉತ್ಸಾಹದಿಂದ ಮುಂದೆಬಂದು ಇದನ್ನೇ ಉಪಯೋಗ ಮಾಡುತ್ತಿದ್ದಾರೆ.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಹಳ್ಳಿಕಾರು, ಗುಡ್ಡುಮಾವು ಮತ್ತು ಅಮೃತಮಹಲ್—ಈ ಜಾತಿಯ ದನಗಳು ಇರತಕ್ಕ ಸ್ಥಳಗಳಲ್ಲಿ ನೀವು ಹೇಳಿರತಕ್ಕ artificial insemination ನ್ನನ್ನು ತೆಗೆದುಕೊಳ್ಳುವುದಕ್ಕೆ ಒಪ್ಪುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನ ಗೌಡ.—ಜನರ ಒಪ್ಪಿಗೆ ಯಿಲ್ಲದಿದ್ದರೆ ಅಂಥ ಕಡೆಗಳಲ್ಲಿ ಇದನ್ನು ಮಾಡುವುದಿಲ್ಲ.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಹೋರಿಗಳನ್ನು ಕಣ್ಣಿನಿಂದ ನೋಡಿದ ಹೊರತು ಇಂಥ ಪ್ರಯೋಗವನ್ನು ಪಡೆಯುವುದಕ್ಕೆ ಜನರು ಒಪ್ಪುವುದಿಲ್ಲ. ಆದ್ದರಿಂದ ಅಂಥ ಸ್ಥಳಗಳಲ್ಲಿ ಹೋರಿಗಳನ್ನು ಒದಗಿಸಲಿಕ್ಕೆ ಏರ್ಪಾಡು ಮಾಡುತ್ತೀರಾ ?

Mr. SPEAKER.—That is a different question.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೋರಿಗಳನ್ನೀಗ ತಾವು ಇಟ್ಟಿದ್ದೀರಲ್ಲಾ ಅವು ಒಳ್ಳೆಯ Pedigree Bullಗಳೇ, ಆ ಬಗ್ಗೆ ರಿಕಾರ್ಡ್ ಇಟ್ಟಿದ್ದೀರಾ ?

ಡಾ॥ ಆರ್. ನಾಗನಗೌಡ.—Pedigree Bull ಗಳೇ ಎಂದು ಹೇಳುವುದಕ್ಕೆ ಕಷ್ಟ. ಇನ್ನು ಮೇಲೆ ಅವುಗಳ ಬಗ್ಗೆ ರಿಕಾರ್ಡ್ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗಾದರೆ ಇದುವರೆಗೆ insemination ನಡೆಸಿರುವುದರಲ್ಲಿ ರೈತರಿಗೆ ಅನ್ಯಾಯವಾಗಿದೆಯೆಂದು ಹೇಳಬಹುದೇ ?

ಡಾ॥ ಆರ್. ನಾಗನಗೌಡ.—ಹಾಗೆ ಹೇಳುವುದಕ್ಕಾಗುವುದಿಲ್ಲ. ಎಲ್ಲವನ್ನೂ ಪರಿಶೀಲನೆ ಮಾಡಿ, ಹೋರಿ ಉತ್ತಮ ತಳಿಯದು ಎಂದು ತಿಳಿದಮೇಲೆಯೇ ಅದರ ಉಪಯೋಗ ಪಡೆಯುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇದರಿಂದ ನೀವು ಹಾಲಿನ ಉತ್ಪತ್ತಿಯನ್ನು ಉತ್ತಮಪಡಿಸಬೇಕೆಂದು ಪ್ರಯತ್ನಪಟ್ಟಿರುವಿರಾ ? ಅಥವಾ ಹೋರಿ ಕರುಗಳ ತಳಿಗಳನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ ?

ಡಾ॥ ಆರ್. ನಾಗನಗೌಡ.—ಹಳ್ಳಿಕಾರು ಜಾತಿಯ ಹೋರಿಗಳನ್ನು ಒಳ್ಳೆಯ draught animals ಹೆಚ್ಚುಮಾಡುವುದಕ್ಕೂ, ಸಿಂಧಿ ಹೋರಿಗಳನ್ನು ಹಾಲಿನ ಉತ್ಪತ್ತಿ ಜಾಸ್ತಿಮಾಡುವುದಕ್ಕೂ ಉಪಯೋಗಿಸುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಲೆನಾಡಿನ ಕಡೆ ಈಗ ಸಿಂಧಿ ಹೋರಿಗಳನ್ನು ಪ್ರಯೋಗಮಾಡಿ ಹುಟ್ಟಿರುವ ಕರುಗಳನ್ನು ನೋಡಿ result ಏನೆಂಬುದನ್ನು ಪರಿಶೀಲಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಮಲೆನಾಡಿನ ಪ್ರಾಂತ್ಯದಲ್ಲಿ ಎರಡು-ಮೂರು ಸ್ಥಳಗಳಲ್ಲಿ ಸಿಂಧಿ ಹೋರಿಗಳನ್ನು ಉಪಯೋಗಮಾಡಿ ನೋಡಿದ್ದೇವೆ. ಶಿವಮೊಗ್ಗ ಮತ್ತು ಸೊರಬ ಕೆನರಾದಲ್ಲಿ ಉಪಯೋಗಿಸಿದ್ದಾರೆ. ಇಂದಿನವರೆಗೆ ಫಲತಾಂಶಗಳು ಚೆನ್ನಾಗಿದೆಯೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ಲಕ್ಕಪ್ಪ.—ಹಾಸನದಲ್ಲಿ ಈ ರೀತಿಯ insemination ಕೇಂದ್ರವನ್ನು ತೆರೆಯುವುದಕ್ಕೆ ವ್ಯವಸ್ಥೆಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಆ ಪ್ರಯತ್ನದಲ್ಲಿದ್ದೇವೆ. ಇಷ್ಟರಲ್ಲೇ ಮಾಡಬೇಕೆಂದಿದೆ.

Land Grant to the Landless (Policy).

Q.—210. **Sri T. HANUMAIYA** (Hiriyur-Scheduled Castes).—

Will the Government be pleased to state :—

what is the policy of Government in sanctioning lands to landless and land-holders in the State ?

A.—**Sri Kadidal MANJAPPA** (Minister for Revenue and Public Works).—

The policy of Government is to grant lands to landless and *bona fide* agriculturists and insufficient holders owning less than five acres of dry land or two acres of wet or garden land at an upset price. The cases of applicants who own more than two acres of wet or five acres of dry land will be considered on merits.

ಶ್ರೀ ಟಿ. ಹನುಮಯ್ಯ.—ಈ ರೀತಿ ಐದು ಎಕರೆ ಖುಷ್ಕಿ ಮತ್ತು ಎರಡು ಎಕರೆ ತರೀ ಜಮೀನನ್ನು ಒಂದೊಂದು ಕುಟುಂಬಕ್ಕೆ ಕೊಡಬೇಕೆಂದು ಹೇಳಿದ್ದೀರಿ. ಮೈಸೂರು ದೇಶದ ಎಲ್ಲಾ ಕಡೆಯೂ ಈ ರೀತಿ ನಿಗದಿ ಮಾಡಿದ್ದೀರೋ ಅಥವಾ ಎಲ್ಲಿಯೋ ಕೆಲವು ಕಡೆ ಮಾತ್ರ ಮಾಡಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಮೈಸೂರು ಸಂಸ್ಥಾನದ ಎಲ್ಲ ಕಡೆಗೂ ಅನ್ವಯಿಸುತ್ತದೆ.

ಶ್ರೀ ಟಿ. ಹನುಮಯ್ಯ.—ಯಾವ ಆಧಾರದ ಮೇಲೆ ಐದು ಖುಷ್ಕಿ ಮತ್ತು ಎರಡು ಎಕರೆ ಇರಬೇಕೆಂದು ನಿರ್ಧರ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟಾದರೂ ಕನಿಷ್ಟ ಪಕ್ಷ ಜಮೀನ್ದಾರರವರಿಗೆ ಕೊಡಬೇಕೆಂಬ ಒಂದು ತತ್ವದ ಆಧಾರದ ಮೇರೆ ಆ ವಿಸ್ತೀರ್ಣವನ್ನು ನಿಗದಿಮಾಡಿದ್ದೇವೆ. ಈ ವಿಸ್ತೀರ್ಣವನ್ನು ಸ್ವಲ್ಪ ಬದಲಾವಣೆಮಾಡಿ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಬೇಕೆಂದಿದ್ದೇವೆ.

ಶ್ರೀ ಟಿ. ಹನುಮಯ್ಯ.—ಯಾವ ತತ್ವದ ಆಧಾರ ವನ್ನಿಟ್ಟುಕೊಂಡು ತಾವೀಗ ಬದಲಾವಣೆ ಮಾಡು ತ್ತಿದ್ದೀರಿ. ರೈತರಿಗೆ ಹೊಟ್ಟೆ ತುಂಬ ಅನ್ನ ಸಿಕ್ಕ ಬೇಕೆಂಬ ತತ್ವವೇನಾದರೂ ನಿಮಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೊಟ್ಟೆಗೆ ಅನ್ನ ಸಿಕ್ಕ ಬೇಕೆಂಬುದೇ ತತ್ವ.

ಶ್ರೀ ಟಿ. ಹನುಮಯ್ಯ.—ಐದು ಎಕರೆ ಸಾಕಾಗು ತ್ತದೆಂದು ಎಲ್ಲಿ ಹೇಳಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ ಅನೇಕ ಸಲ ಈ ಪ್ರಶ್ನೆ ಬಂದಿತ್ತು. ನಾನು ಆಗಲೇ ಹೇಳಿದಂತೆ, ಈ ಪ್ರಶ್ನೆಗೆ ಸಂಬಂಧಪಟ್ಟಂತಿರುವ ನಿಯಮಾವಳಿ ಗಳನ್ನು ತಿದ್ದುಪಡಿ ಮಾಡುವುದಕ್ಕೆ ಕಾರ್ಯಕ್ರಮ ಕೈಕೊಳ್ಳಲಾಗಿದೆ. ಆದಷ್ಟು ಜಾಗ್ರತೆ ನಿಯಮಾವಳಿ ಗಳನ್ನು ತಿದ್ದುಪಡಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ 'ಸೀಲಿಂಗ್ ಲಿಮಿಟ್' ಪ್ರಕಾರ ಒಬ್ಬ ವ್ಯವಸಾಯಗಾರನಿಗೆ ಎಷ್ಟು ಎಕರೆ ಇರಬೇಕೆಂದು ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಮಾಡಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಹಾಲಿ ಇರತಕ್ಕ ನಿಯಮಾವಳಿಗನ್ನು ಬದಲಾವಣೆ ಮಾಡಬೇಕೆಂದಿದ್ದೇ ವೆಂದು ಹೇಳಿದಿರಿ; ಯಾವ ರೀತಿಯಲ್ಲಿ ಬದಲಾವಣೆ ಮಾಡುತ್ತೀರಿ ? ಹೆಚ್ಚು ಮಾಡಬೇಕೆಂದಿದೆಯೇ ಅಥವಾ ಕಡಮೆ ಮಾಡಬೇಕೆಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ. ವಿಸ್ತೀರ್ಣವನ್ನು ಹೆಚ್ಚು ಮಾಡಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಡಿ. ದೇವರಾಜ್ ಅರಸ್.—ತಾವೀಗ ಕೊಡ ತಕ್ಕ ಐದು ಎಕರೆ ಖುಷ್ಕಿ ಎರಡು ಎಕರೆ ತರೀ ಐದು ಜನರ ಕುಟುಂಬಕ್ಕೆ ಎಂದು ತಾನೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೂ ಐದು ಜನರ ಕುಟುಂಬಕ್ಕೆ ಎಂದು ಮಾಡಿಲ್ಲ. ಹೆಚ್ಚಿಗೆ ವಿಸ್ತೀರ್ಣ ವನ್ನು ಕೊಡುವುದಕ್ಕೆ ಸರ್ಕಾರದವರಿಗೆ ಅಧಿಕಾರವಿದೆ. ಹೆಚ್ಚಿಗೆ ಜನವಿದ್ದರೆ ಒಂದು ಅರ್ಜಿಕೊಟ್ಟು ಹೆಚ್ಚು ಜಮೀನು ಪಡೆಯುವುದಕ್ಕೆ ಅವಕಾಶವಿದೆ.

ಶ್ರೀ ಡಿ. ದೇವರಾಜ್ ಅರಸ್.— ಆ ಅವಕಾಶವಿರು ವಾಗ ಇನ್ನೇಕೆ ಇದನ್ನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಳೀಯ ಅಧಿಕಾರಿ ಗಳಿಗೂ ಕೊಂಚ discretionಗೆ ಅವಕಾಶ ಕೊಟ್ಟರೆ ಪ್ರತಿಯೊಬ್ಬರೂ ಸರ್ಕಾರದವರೆಗೆ ಬರುವುದು ತಪ್ಪುತ್ತದೆ ಎಂದು.

ಶ್ರೀ ಬಿ. ರಾಚಯ್ಯ.—ಮೈಸೂರು ಸಂಸ್ಥಾನದಲ್ಲಿ ಹಾಲ ಎಷ್ಟು ಜನರಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.— 80-85 ಲಕ್ಷ.

ಶ್ರೀ ಬಿ. ರಾಚಯ್ಯ.—ಅದರಲ್ಲಿ ವ್ಯವಸಾಯ ದಿಂದಲೇ ಜೀವನ ಮಾಡುವವರು ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಬಿ. ರಾಚಯ್ಯ.—ಸಾಗುವಳಿಯಾಗದೆ ಹಿಡು ವಳಿ ಜಮೀನಾಗಿರುವ ಜಮೀನೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಖಾಯಂ ಬಂಜರು ಜಮೀನು ಬಹಳ ಕಡಿಮೆ; ಹಂಗಾಮಿ ಬಂಜರಿನ ವಿಸ್ತೀರ್ಣ ಜಾಸ್ತಿ ಇದೆ.

ಶ್ರೀ ಬಿ. ರಾಚಯ್ಯ.—ಹಿಡುವಳಿ ಬಂಜರು ಜಮೀ ನನ್ನು ಸಾಗುವಳಿ ಮಾಡುವುದಕ್ಕೆ ಕಾನೂನೇನಾದರೂ ಜಾರಿಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Cultivation of Fallow Lands Act ಎಂಬುದಿದೆ. ಆದರೆ ಅದರ ಪ್ರಯೋಗವನ್ನು ರೈತರು ಹೆಚ್ಚಾಗಿ ಕೈಕೊಂಡಂತೆ ಕಾಣುವುದಿಲ್ಲ.

ಶ್ರೀ ಬಿ. ರಾಚಯ್ಯ.—ಸರ್ಕಾರದವರು ಈ ಆಕ್ಟನ್ನು ತೀವ್ರವಾಗಿ ಜಾರಿಗೆ ಕೊಟ್ಟಿಲ್ಲವೆಂದು ಭಾವಿಸೋಣವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರೇನೋ ತೀವ್ರವಾಗಿ ಜಾರಿಗೆ ಕೊಟ್ಟಿದ್ದಾರೆ. ಆದರೆ ರೈತರು ಉಪಯೋಗಿಸಿಕೊಂಡಿಲ್ಲ.

ಶ್ರೀ ಬಿ. ರಾಚಯ್ಯ.—ತೆಗೆದುಕೊಳ್ಳದೆ ಹೋದ ಮೇರೆ, ಆಕ್ಟ್ ಪ್ರಕಾರ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಆಕ್ಟನ್ನೇ ಬದಲಾ ವಣೆ ಮಾಡಬೇಕೆಂದು ಸರ್ಕಾರದವರ ಮನಸ್ಸಿನಲ್ಲಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಮೈಸೂರು ಸಂಸ್ಥಾನದಲ್ಲಿ ಸಾಗುವಳಿಗೆ ಲಾಯಖ್ಖಾದ ಜಮೀನೆಷ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಒಂದು ಕೋಟಿ ಎಕರೆಗಳಿರಬಹುದು; ತರಾ ಒಂದಕ್ಕೆ ಒಂದೊಂದು ಎಕರೆ ಬರುವಷ್ಟು ಜಮೀನಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಜಮೀನಿಲ್ಲದಿರುವವರು ಎಷ್ಟು ಪ್ರಯತ್ನ ಪಟ್ಟರೂ ಜಮೀನು ಸಿಕ್ಕದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಿಕ್ಕದಿರತಕ್ಕ ಜಮೀ ನಿಗೆ ದರಖಾಸ್ತು ಹಾಕಿದರೆ ಹಾಗೆಯೇ ಆಗುತ್ತದೆ. ಗೋಮಾಳ, ಅರಣ್ಯ ಮುಂತಾದುವುಗಳಿಗೆ ಸಾಮಾನ್ಯ ವಾಗಿ ಅರ್ಜಿ ಹಾಕುತ್ತಾರೆ. ಆದ್ದರಿಂದ ಅದು ಸಿಕ್ಕು ವುದು ಕಷ್ಟ.

ಶ್ರೀ ಡಿ. ಎಂ. ಗೋವಿಂದರಾಜು.—ಎಲ್ಲೆಲ್ಲ ಜಮೀನು ಸಿಕ್ಕುತ್ತದೆಂದು ಒಂದು ಪಟ್ಟಿ ಮಾಡಿಸಿಡು ವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಪಟ್ಟಿಮಾಡಿ ಹಾಕಬೇಕೆಂದು ತಾಲ್ಲೂಕು ಆಫೀಸುಗಳಿಗೆ ಹೇಳಿದೆ.

ಶ್ರೀ ಜಿ. ಬಸಪ್ಪ.—ಹಾಲಿ, ದೊಡ್ಡ ಹಿಡುವಳಿಗಳು ಆಸ್ತಿ ವಿಭಾಗದ ದೆಸೆಯಿಂದ 5 ಎಕರೆಗಿಂತಲೂ ಕಡಮೆ ಯಾಗದಿರುವುದಕ್ಕೇನಾದರೂ ಕಾರ್ಯಕ್ರಮ ಕೈಕೊಂಡಿ ದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೂ ಕೂಡ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯೋಚಿಸ ಲಾಗುವುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಯಾ ತಾಲ್ಲೂಕಿ ನಲ್ಲಿ ಯಾವ ಯಾವ ಸರ್ವೇನಂಬರಿನ ಎಷ್ಟೆಷ್ಟು ಎಕರೆ ಜಮೀನುಗಳು ಸಾಗುವಳಿಗೆ ಕೊಡಬಹುದಾಗಿವೆಯೆಂಬ ಬಗ್ಗೆ ಒಂದು ತಖ್ತೆಯನ್ನು ಜನರಿಗೆ ಓದಗಿಸುವುದು ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಮಾಡ ಬೇಕೆಂದು ಸೂಚನೆ ಕೊಡಲಾಗಿದೆ. ಅನೇಕ ತಾಲ್ಲೂಕು ಆಫೀಸುಗಳಲ್ಲಿ ಈ ರೀತಿಯ ಪಟ್ಟಿಯಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಪ್‌ಸೆಟ್ ಪ್ರೈಸ್ ಎಂದು ಗೊತ್ತು ಮಾಡಿದ್ದೀರಲ್ಲಾ, ಎಷ್ಟು ರೂಪಾಯಿಗಳಿಂದ ಎಷ್ಟು ರೂಪಾಯಿಗಳವರೆಗೆ ಇರ ಬೇಕೆಂದು ನಿಗದಿಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ಸರ್ಕಾರದ ವರು ಯಾವ ಹುಕುಮನ್ನೂ ಮಾಡಿಲ್ಲ. ರೆವಿನ್ಯೂ

(ಶ್ರೀ ಕಡಿದಾಳ್ ಮಂಜಪ್ಪ.)

ಕಮೊಷನರು ನ್ಯಳದ ಅಧಿಕಾರಿಗಳ guidance ಬಗ್ಗೆ ಒಂದು ತಖ್ತೆ ಮಾಡಿಕಳುಹಿಸಿದ್ದಾರೆ ಅಷ್ಟೆ. ಆ ತಖ್ತೆಯಂತೆಯೇ ಯಾವಾಗಲೂ ಅನ್ವಯಿಸಬಾರದು, ನ್ಯಳದ ಸನ್ನಿವೇಶ ನೋಡಿಕೊಂಡು ಬೆಲೆ ನಿಗದಿಮಾಡ ಬೇಕೆಂದು ಸರ್ಕ್ಯುಲರ್‌ನ್ನು ಈಚೆಗೆ ಕಳುಹಿಸಿದೆ.

1 P.M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಫಾರೆಸ್ಟ್ ಏರಿಯಾಕ್ಕೆ ಅಕ್ಕಪಕ್ಕದಲ್ಲಿರುವ ಅಲ್ಪಸ್ವಲ್ಪ ಸರ್ಕಾರಿ ಜಮೀನುಗಳಿಗೆ ದರಖಾನ್ತು ಹಾಕಿದರೆ ಆ ಜಮೀನು ಗಳನ್ನು ಮಂಜೂರು ಮಾಡದಂತೆ ತಡೆ ಮಾಡಲು ಈ ಇಲಾಖೆಯವರು ಅಡ್ಡಿಅಡಚಣೆಗಳನ್ನು ತಂದೊಡ್ಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಫಾರೆಸ್ಟ್ ಜಮೀನನ್ನು ಬಿಟ್ಟುಕೊಡಲು ಅವರು ಒಪ್ಪುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಕೇಳಿದ ಪ್ರಶ್ನೆ ಅದಲ್ಲ. ಫಾರೆಸ್ಟ್ ಜಮೀನಿಗೆ ಅಕ್ಕಪಕ್ಕದಲ್ಲಿರುವ ಸರ್ಕಾರಿ ಹಿಡುವಳಿಯಲ್ಲಿರತಕ್ಕಂಥ ರೆವಿನ್ಯೂ ಲ್ಯಾಂಡನ್ನು ಕೊಡಲು ಅವರು ಅಡ್ಡಿಪಡಿಸುತ್ತಿರುವುದು ತಮ್ಮ ಅವಗಾಹನೆಗೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

QUESTIONS AND ANSWERS ON THE DAY

(but not taken up).

Hulikal Ghat and Agumbe Ghat Roads (Asphalting).

Q.—77. **Sri B. MADHAVACHAR** (Bhadravati).

Will the Government be pleased to state :—

(*a*) the average movement of vehicles per day through Hulikal Ghat and Agumbe Ghat Roads ;

(*b*) whether they intend to take up asphalting these two roads early ?

A.—**Sri Kadidal MANJAPPA.**—(Minister for Revenue and Public Works).—

(*a*) (1) *Hulikal Ghat Road.*—

On an average 10 buses, 25 lorries, 10 cars and 10 vans.

(2) *Agumbe Ghat Road.*—

About 30 taxies of 7 seaters.

(*b*) (1) *Hulikal Ghat Road.*—

Asphalting 4 miles of the Ghat Road is sanctioned; land work has been taken up.

(2) *Agumbe Ghat Road.*—

The entire length in Mysore portion has been concreted.

Road between Hullanahalli and Sangam (Repairs).

Q.—121. **Sri M. LINGANNA** (Nanjangud).—

Will the Government be pleased to state :—

(*a*) whether the road between Hullanahalli and Sangam in Nanjangud taluk is handed over to Public Works Department by the District Board of Mysore ;

(*b*) whether there is any representation by the people to repair this road ;

(*c*) if so, what action is taken now by the Government ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Yes.

(*c*) An estimate is being got up for effecting improvements to the road.

Minor and major tanks in Holalkere and Chitaldrug Taluks. (Maintenance and repairs).

Q.—270. **Sri G. DUGGAPPA** (Holalkere—Scheduled Castes).—

Will the Government be pleased to state :—

(*a*) the number of minor and major tanks in Holalkere and Chitaldrug Taluks ;

(*b*) the amount spent by the Public Works Department on the repair of channels, sluices, feeder channels and tank bunds during 1953-54 and 1954-55 ?

A.—**Sri Kadidal MANJAPPA** (Minister for Revenue and Public Works).—